ಆದರೂ ಸಹ ಈ ಸಾರಿ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ ಮೊನ್ನೆ ತಾನೇ ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿ ನಾವು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ

20 ವಿಷಯ ಕಾವೇರಿ ನೀರಾವರಿ ನಿಗಮಕ್ಕೆ ಹೆಚ್ಚಿನ ಧನ ಸಹಾಯವನ್ನು ಒದಗಿಸುವುದರ ಬಗ್ಗೆ

ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಅಧ್ಯಕ್ಷರೆ, ಸಮಯದ ಅಭಾವವಿರುವುದರಿಂದ ಕ್ಷಮೆ ಯಾಚಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ ಕಾವೇರಿ ನಿಗಮದ ಬಗ್ಗೆ ಹೇಳಬೇಕಾದರೆ, ಈಗಾಗಲೇ ಕಾವೇರಿ ನಿಗಮ, ಕೃಷ್ಣ ನಿಗಮ, ಕರ್ನಾಟಕ ನೀರಾವರಿ ನಿಗಮ ಎಂದು ಅನೇಕ ನಿಗಮಗಳಿವೆ ನಾಲ್ಕೂವರೆ ವರ್ಷಗಳಲ್ಲಿ ಕೃಷ್ಣ ನಿಗಮಕ್ಕೆ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಬಹಳ ಸಂತೋಷ ಕರ್ನಾಟಕ ನೀರಾವರಿ ನಿಗಮಕ್ಕೂ ಕೂಡ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದೂ ಸಹ ಬಹಳ ಸಂತೋಷ ಆದರೆ ದುರಂತವೆಂದರೆ, ನಮ್ಮ ಕಾವೇರಿ ನಿಗಮಕ್ಕೆ ಇಲ್ಲಿಯವರೆಗೆ ಕೇವಲ 450 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಇದು ಬಹಳ ಅನ್ಯಾಯ ನಾವು ಯಾವ ಪಾಪ ಮಾಡಿದ್ದೇವೆಂದು ನನಗನ್ನಿಸುತ್ತದೆ ಆ ನಿಗಮಕ್ಕೆ 3000 ಕೋಟಿ ರೂ ಮತ್ತು ಒಂದು ಸಾವಿರ ಕೋಟಿ ರೂ ಗಳನ್ನು ಕೊಟ್ಟಿರುವಾಗ ಈ ಕಾವೇರಿ ನಿಗಮಕ್ಕೆ ಕೇವಲ 450 ಕೋಟಿ ರೂ ಗಳನ್ನು ಕೊಟ್ಟಿರುವುದು ಬಹಳ ಕಷ್ಟದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಕಾವೇರಿ ನಿಗಮದಲ್ಲಿ ಸುಮಾರು 100 ಕೋಟಿ ರೂಪಾಯಿ ಇರಿಗೇಷನ್ ಬಿಲ್ ಪೆಂಡಿಂಗ್ ಇದೆ ಸಂಬಳ 60 ಕೋಟಿ ರೂಪಾಯಿ ಇದೆ, 310 ಕೋಟಿ ರೂಪಾಯಿ as on today pending ಇದೆ 1050 ಕೋಟಿ ರೂಪಾಯಿ ಟೆಂಡರ್ ಕರೆದಿದ್ದಾರೆ ಆದರೂ ಸಹ ನಮ್ಮ ಭಾಗದಲ್ಲಿ ಯಾರೂ ಟೆಂಡರ್ ಹಾಕುವುದಕ್ಕೆ ಬರುವುದಿಲ್ಲ ಕಾರಣ ಬಿಲ್ ಪಾಸಾಗುವುದಿಲ್ಲ ಮೂರು-ನಾಲ್ಕು ವರ್ಷಗಳಿಂದ ಬಿಲ್ ಪೆಂಡಿಂಗ್ ಇದೆ 1050 ಕೋಟಿ ರೂಪಾಯಿ ಇವತ್ತು ಟೆಂಡರ್ ಕರೆದು ಪೆಂಡಿಂಗ್ ಇದೆ ನನ್ನ ಕ್ಷೇತ್ರಕ್ಕೆ ನಾನು ಬರುವುದಾದರೆ, ಒಂದು ಅಕ್ವಿಡಕ್ಟ್ ಆದರೆ ಸುಮಾರು 22,000 ಎಕರೆ ಇರಿಗೇಷನ್ ಆಗುತ್ತದೆ ಆದರೆ ಎಂ ಡಿ ಯವರು ಒಂದು ಪತ್ರ ಬರೆದಿದ್ದಾರೆ, ಆ ಪತ್ರದಲ್ಲಿ ಎಲ್ಲಾ ಕೆಲಸಗಳನ್ನೂ ಕೂಡಲೇ ಸ್ಥಗಿತ ಮಾಡಿ ಎಂದು ಹೇಳಿದ್ದಾರೆ ಇದು ಬಹಳ ಕಷ್ಟ ನಾನು ಹೇಳುವುದು ಇಷ್ಟೆ ನಾವು ಯಾವು ಪಾಪ ಮಾಡಿದ್ದೇವೆ, ಕಾವೇರಿ ನಿಗಮದ ವ್ಯಾಪ್ತಿಗೆ ಬರತಕ್ಕಂತಹ ಶಾಸಕರು, ರೈತರು ಯಾವ ಪಾಪ ಮಾಡಿದ್ದೇವೆ ಎಂದು ಹೇಳುವುದು ನನಗೆ ಬಹಳ ದುಃಖಕರವಾದ ಸಂಗತಿ ಮುಖ್ಯಮಂತ್ರಿಗಳಾಗಲಿ, ಯಾರೇ ಆಗಲಿ, ಅವರು ಕೇವಲ ಒಂದು ಭಾಗಕ್ಕೆ ಸೀಮಿತವಾಗಬಾರದು ಎನ್ನುವುದು ನನ್ನ ಅನಿಸಿಕೆ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುವುದು, ಈ ಕಾವೇರಿ ನಿಗಮಕ್ಕೆ ಕೊಟ್ಟಿರುವಂತಹ

ಹಣ 200 ಕೋಟಿ ರೂಪಾಯಿ ಸಂಬಳಕ್ಕೂ ಸಹ ಸಾಕಾಗುವುದಿಲ್ಲ ನಮ್ಮ ಉಪ ಮುಖ್ಯಮಂತ್ರಿಗಳೇ ಅರ್ಥ ಸಚಿವರಾಗಿರುವುದರಿಂದ ನಾನು ಅವರಲ್ಲಿ ತಮ್ಮ ಮೂಲಕ ವಿನಂತಿಸುತ್ತೇನೆ ತಾವು ಹಣವನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡದೆ ಇದ್ದರೂ ದುಃಖ ಇಲ್ಲ, ಕೊನೆಪಕ್ಷ ಸರ್ಕಾರ ಆ ನಿಗಮ ಸಾಲ ತೀರಿಸಿಕೊಳ್ಳುವುದಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟರೆ, ಈ ವರ್ಷಕ್ಕೆ 500 ಕೋಟಿ ರೂಪಾಯಿಯಾದರೂ ಕೊಟ್ಟರೆ ನಮ್ಮ ಭಾಗಕ್ಕೆ ಬಂದಿರುವಂತಹ ದುರಂತ ಸ್ವಲ್ಪ ತಪ್ಪುತ್ತದೆ ಸುಮಾರು 1116 ಕೋಟಿ ರೂ ಗಳನ್ನು ಕೇಳಿದ್ದಾರೆ, ಅವೆಲ್ಲವನ್ನೂ ಕೊಟ್ಟರೆ ಬಹಳ ಸಂತೋಷ ಕೊನೇ ಪಕ್ಷ 500 ಕೋಟಿ ರೂಪಾಯಿಯಾದರೂ ಸಾಲ ತೆಗೆದುಕೊಳ್ಳುವುದಕ್ಕೆ ಸನ್ಮಾನ್ಯ ಅರ್ಥ ಸಚಿವರು ಅವಕಾಶ ಮಾಡಿಕೂಟ್ಟರೆ, ನಮ್ಮ ಭಾಗಕ್ಕೆ ಸ್ವಲ್ಪ ಕೆಲಸವಾಗುತ್ತದೆ ಎಂದು ನಾನು ವಿನಂತಿಸಿಕೂಳ್ಳುತ್ತೇನೆ ಇವತ್ತು ಒಂದು ಸಂತೋಷ ಎಂದರೆ, ಹೇಮಾವತಿ ಕೆರೆ ತುಂಬಿ ನೀರು ಬಿಡಲಾಗುತ್ತಿದೆ ಒಟ್ಟಿನಲ್ಲಿ ಈ ಬಾಬಿಗೆ ಹೆಚ್ಚು ಹಣ ಕೊಡಬೇಕೆಂದು ನಾನು ಮಾನ್ಯ ಅರ್ಥ ಸಚಿವರಲ್ಲಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ

ಶ್ರೀ ಎಸ್ ಶಿವಣ್ಣ (ತುಮಕೂರು) ಕಾವೇರಿ ನೀರಾವರಿ ನಿಗಮಕ್ಕೆ ಸುಮಾರು 450 ಕೋಟಿ ರೂಪಾಯಿ ಬಾಕಿ ಇದೆ, ಈಗ ಬಿಡುಗಡೆ ಮಾಡಿರುವುದು ಬರೀ 200 ಕೋಟಿ ರೂಗಳು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು ಶಿವಣ್ಣರವರೇ, ಆ ಏರಿಯಾದಲ್ಲಿ ಬರತಕ್ಕಂತಹ ಎಂಟು ಜಿಲ್ಲೆಗಳ ಎಲ್ಲಾ ಶಾಸಕರು ಗಮನ ಸೆಳೆಯಬೇಕಾ? ಅವರು ಗಮನ ಸೆಳೆದಿದ್ದಾರೆ, ಉತ್ತರ ಕೊಡುತ್ತಾರೆ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಹೆಚ್ ನಿಂಗಪ್ಪ (ಕುಣಿಗಲ್) ಮಾನ್ಯ ಅಧ್ಯಕ್ಷರೆ, ಹಣದ ಆಭಾವವಿರುವುದರಿಂದ ಯಾವ ಕೆಲಸವನ್ನೂ ಮುಂದುವರೆಸಬೇಡಿ ಎಂದು ಕಾವೇರಿ ನೀರಾವರಿ ನಿಗಮದ ಮ್ಯಾನೇಜಿಂಗ್ ಡೈರೆಕ್ಟರ್ ಆದೇಶ ಕೊಟ್ಟಿದ್ದಾರೆ ಎಲ್ಲಾ ಕೆಲಸಗಳು ಸ್ಥಗಿತಗೊಂಡಿವೆ ಅದಕ್ಕೋಸ್ಕರ ಈ ಕಡೆ ಗಮನ ಹರಿಸಿ ಹೆಚ್ಚು ಹಣವನ್ನು ಬಿಡುಗಡೆ ಮಾಡಿದರೆ ಆ ಕೆಲಸವನ್ನು ಮುಂದುವರೆಸುವುದಕ್ಕೆ ಅನುಕೂಲವಾಗುತ್ತದೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಾವರಿ ನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮಕ್ಕೆ ಹೆಚ್ಚು ಹಣ ಎತ್ತುವಳಿ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ ಇದರ ಬಗ್ಗೆ ಪರಿಶೀಲನೆ ಮಾಡಿ, ಅಗತ್ಯವಾಗಿ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಆ ಸೀಲಿಂಗ್ ಎಲ್ಲಾ ನೋಡಿಕೊಂಡು ಎಷ್ಟು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅಷ್ಟು ಮಾಡಿಕೊಡುತ್ತೇವೆ